ಮೈಸೂರ ಗೆಜಿಟ.

ನಂ. 50 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ 1884

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 13, ಸ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ರೀಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್‌ಸೂಪರ್ಟೆಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟ್‌ಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟುಗಳು ವ ರೆಗ್ಯುಲೇಷ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ಮೊಕ್ಕಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತೀ ಬಾಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡಿ|| ಕಮ್ಮಿಷನರ್ ವ ಫಾರೆಸ್ಟ್ ಆಫೀಸರ್‌ಗಳಿಂದ ನಡಿಸಲ್ಪಡುತ್ತೆ:—

		ಸ್ವಲ್ಪ ಹೆಚ್ಚು ಕಡಿಮೆಯಾಗಿ ಟನ್‌ಗಳು.
ಶ್ರೀರಂಗಪಟ್ಟಣ, ತಾರೀಖು 1ನೇ ಡಿಶಂಬರ್ 1884	..	500
ಹುಣಸೂರು, ತಾರೀಖು 4ನೇ ಡಿಟೋ „		
ಬೆಂಗಳೂರು, ತಾರೀಖು 8ನೇ ಡಿಟೋ „	..	280
ಸೊರಬ, ತಾರೀಖು 13ನೇ ಡಿಟೋ „	..	200
ಅನಂತಪುರ, ತಾರೀಖು 18ನೇ ಡಿಟೋ „	..	200

ಶಿವಮೊಗ್ಗಾ, ತಾರೀಖು 22ನೇ ಡಿಟೋ	,, ..	500
ತೀರ್ಥಹಳ್ಳಿ, ತಾರೀಖು 7ನೇ ಜನವರೀ 1885	..	200
ಚಿಕ್ಕಮಗಳೂರು, ತಾ|| 14ನೇ ಡಿಟೋ	,, ..	200
ಹಾಸನ, ತಾರೀಖು 21ನೇ ಡಿಟೋ	,, ..	400

ಹರಾಜಿನ ಪರತ್ತುಗಳು.—ಸ್ ಈ 1874ನೇ ಇಸವಿ ಡಿಶಂಬರ್ 5ನೇ ಮುಕ್ತಂ 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ ಮಾಡಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ಘೋಷಿಸಲ್ಪಡುವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ತ ಪಾವತೀ ಬಗ್ಗೆ ವಾಯಿದೆಯು, 1885ನೇ ಇಸವೀ ಮಾರ್ಚಿ 25ನೇ ತಾರೀಖಿಗೆ ಆಖೈರಾಗುವದು.

ತಾರೀಖು 10ನೇ ನವಂಬರ್ 1884.

ನಂ. 181.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಕೆಲವು ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ವೃತ್ತೀವಾರಾಗಿ ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳಗಳಲ್ಲೂ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪ್ರಾರಂಭವಾಗಿ, ಉಳಿಕೆ ಯಾವದೂ ಇಲ್ಲದೆ ವೃತ್ತಿಗಳು ಜಡ ದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು ಪ್ರಥಮತಃ ಹರಾಜು ಮಾಡಲ್ಪಡುವ ವೃತ್ತಿಗಳ ಮೇಲೆ ಬಾಕೀ ಆಗತಕ್ಕ ಪೂರಾ ಕಂದಾಯದ ಮೊಬಲಗು ಹುಟವ ಆಗದೆ ಯಿರುವ ಪಕ್ಷದಲ್ಲಿ ಪೂರಾ ಗ್ರಾಮವನ್ನು ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಆತನ ಸುಫರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಸಂದರ್ಭಾನುಸಾರ ಸಬ್ ಡಿವೀಜ್ಞ ಅಫೀಸರಿಂದಾಗಲಿ ರುಜು ಮೊಹರ್ ಮಾಡೋಕಾದ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್ನಲ್ಲಿ ಆಗುವ ಆಖೈರಿ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ. ತರೀ ಖುಷ್ಕಿ ಸಹ	ಅಂದಾಜು ಹುಟ್ಟುವಳೀ ಯಾಜೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವಬಾಕೀಗೋಸ್ಕರ ಗ್ರಾಮ ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು	ಕುಣಿಗಲ್	ಕುಣಿಗಲ್	ಜೋಡಿ ಕೃಷ್ಣಸಾಗರ ಹಾರ	ಪುಟ್ಟಯ್ಯ ವ ಅಗ್ರ ಅರುಣಾಚಲ ಭಟ್ಟ	6 6 0	87 3 8	65 3 7	133 7 7	ಅಮಲ್ದಾರರ ರೂಬರುನ ಇಸವಿ ಜನವರೀ 1885ನೇ ತಾರೀಖು 7ರಲ್ಲಿ ಕುಣಿಗಲ್‌ನಲ್ಲೆ
ಕಡೂರು	ಪೆಲೂರು	ತಗನೆ	ಜೋಡಿ ಸನ್ಯಾಸಿಹಳ್ಳಿ	ಭಾಗೀರತಮ್ಮ ಕೇಶವಾಚಾರೀ ಇತರ 8 ಮಂದಿ	ತರೀ ಖುಷ್ಕಿ ಎ. ಗುಂ. ಗ. 183 19 0	217 12 0	132 12 0	204 12 10 ಜಡ್ತೀ ವ ಬಾಂದುಲಾಗವಡು ವಗೈರೆ ದೇಖೀಲ್.	ಅಮಲ್ದಾರರ ರೂಬರುನ ಇಸವಿ ಜನವರೀ 1885ನೇ ತಾರೀಖು 7ರಲ್ಲಿ.

ತಾರೀಖು 3ನೇ ಡಿಸಂಬರ್ 1884.

ನಂ. 182.—ತಿದ್ದುಪಾಟು.—ಸ್ರ 1884ನೇ ಇಸವಿ ಜೂ॥ 17ನೇ ಮುಕ್ತಮಿನ 57ನೇ ನಂಬರುಳ್ಳ ಈ ಆಫೀಸ್ ಇಸ್ತಿಹಾರ್ ನಾಮೆಯಲ್ಲಿ ಕಡೂರು ಡಿಸ್ಟ್ರಿಕ್ಟು ಹಾಸನ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುನಂತೆ ಛಾಯಿಷಾದ "ಚಿಕ್ಕನ ಹಳ್ಳಿ" ಎಂಬ ಗ್ರಾಮಕ್ಕೆ ಬದಲಾಗಿ "ಬಿಕ್ಕನ ಹಳ್ಳಿ" ಎಂದು ಓದತಕ್ಕದ್ದು.

ತಾರೀಖು 5ನೇ ಡಿಸಂಬರ್ 1884.

ನಂ. 183.—ಸ್ರ 1884ನೇ ಇಸವಿ ನವಂಬರ್ 27ನೇ ಮುಕೂಮಿನ ಮಧ್ಯಾನ್ಹಾತ್ಪರ ಮೆ॥ ಅಸಿಸ್ಟೆಂಟ್ ಕಮ್ಮಿಷನರ್ ಚಲುವಯ್ಯಂಗಾರ್ರವರು ಮೆ॥ ದೇವರಾಜೇ ಅರಸಿನವರಿಗೆ ಮೈಸೂರು ಡಿಸ್ಟ್ರಿಕ್ಟು ಸೆಕೆಂಡ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು ಮತ್ತು ಮುಜರಾಯಿ ಇಲಾಖಾ ಚಾರ್ಜನ್ನು ಒಪ್ಪಿಸಿರುತ್ತಾರೆ.

ತಾರೀಖು 6ನೇ ಡಿಸಂಬರ್ 1884.

ನಂ. 184.—ಸ್ರ 1834ನೇ ಇಸವಿ ನವಂಬರ್ 20ನೇ ಮುಕ್ತಮಿನ ಈ ಆಫೀಸ್ 176ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ್ ತಾಲ್ಲೂಕ್ ಅಮಲ್ದಾರ್ ಕುಮಾರಸಾಮಿ ಮೊದಲಿಯಾರ್‌ಗೆ ಕೊಡೋಣಾದ ರಜಾಕ್ಕೆ ಜಾಸ್ತಿಯಾಗಿ 2 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 10ನೇ ಡಿಸಂಬರ್ 1884.

ನಂ. 185.—ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಜಿ. ರಘುನಾಥರಾಯರವರು, ಕೋಲಾರ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಆಫೀಸ್ ಚಾರ್ಜನ್ನು ಮೆ॥ ಯ್. ಚಲುವಯ್ಯಂಗಾರ್ರಿಗೆ ಮಾಹೇ ಮುಜಕೂರು 5ನೇ ಮುಕ್ತಂ ಮಧ್ಯಾನ್ಹಾತ್ಪರ ಒಪ್ಪಿಸಿರುತ್ತಾರೆ.

ನಂ. 186.—ಸ್ರ 1884ನೇ ಇಸವಿ ಡಿಸಂಬರ್‌ಗುರ್ರೇ ತಾರೀಖಿನಲ್ಲಿ ಮೆ॥ ಡಿ. ದೇವರಾಜೇ ಅರಸಿನವರು ಮೈಸೂರು ಡಿಸ್ಟ್ರಿಕ್ಟು 2ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು ಮತ್ತು ಮುಜರಾಯಿ ಇಲಾಖಾ ಚಾರ್ಜನ್ನು ಮೆ॥ ಸಿ. ಶ್ರೀನಿವಾಸಯ್ಯಂಗಾರ್ರಿಗೆ ಒಪ್ಪಿಸಿ ಇರುತ್ತಾರೆ.

ತಾರೀಖು 12ನೇ ಡಿಸಂಬರ್ 1834.

ನಂ. 188.—ಕ್ರಿಸ್ಟಮಾಸ್ ರಜಾದಿನಗಳಿಗೋಸ್ಕರ ಈ ಕೀಮೇಯ ದರೋಬಸ್ತು ಪಬ್ಲಿಕ್ ಆಫೀಸಗಳೂ ಸ್ರ 1884ನೇ ಇಸವಿ ಡಿಸಂಬರ್ 22ನೇ ಸೋಮವಾರದ ಲಾಗಾಯತು, ಸ್ರ 1885ನೇ ಜನವರೀ 3ನೇ ಶನಿವಾರದ ವರೆವಿಗೂ ಯರಡು ದಿನಗಳೂ ಸೇರಿ ಬರೆ ಖಾಸ್ತು ಮಾಡಲ್ಪಡತಕ್ಕವು.

ಸದರೀ ರಜಾದಿವಸಗಳಲ್ಲಿ ಜರೂರಿಯಾತ ಕೆಲಸಗಳನ್ನು ಚಲಾಯಿಸುವದಕ್ಕೋಸ್ಕರ ಇಲಾಖೇ ಮೊಖ್ತೇಸರರುಗಳಿಂದ ಯೇರ್ಪಾಡು ಮಾಡಲ್ಪಡತಕ್ಕದ್ದು.

ಈ ಇಸ್ತಿಹಾರ್‌ನಾಮೆಯು ತಾಲ್ಲೂಕು ಸಿಬ್ಬಂದೀಗು ಅಥವಾ ಜವಾಬಂದಿ ಫೈಸಲಾತಿ ಕೆಲಸದಲ್ಲಿ ಇರತಕ್ಕವರಗಳಿಗೂ ಲಗಾವಾಗುವದಿಲ್ಲವು.

ಬಸೋಜೀಬ ಹುಕುಂ,

ಆರ್. ವಿಜಯೀಂದ್ರರಾವ್,

ಸೆಕ್ರೇಟೇರಿ.